# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ಗೌಡ ಬಿ.ಪಾಟೀಲ್ ಇವರು ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

************

**ಪ್ರಶ್ನೆ:**

ಹೆಬ್ಬಾಳದಲ್ಲಿರುವ ವಿದ್ಯುತ್ ಚಿತಾಗಾರದಿಂದಾಗಿ ಸುತ್ತಮುತ್ತಲಿನ ಜನರಿಗೆ ತುಂಬಾ ತೊಂದರೆ ಉಂಟಾಗುತ್ತಿದೆ. ಇಲ್ಲಿ ಶವ ಸಂಸ್ಕಾರ ಮಾಡುತ್ತಿರುವುದರಿಂದ ಉಂಟಾಗುವ ಹೊಗೆ ಮತ್ತು ಬೂದಿಯು ಸುತ್ತಲಿನ ಪರಿಸರದಲ್ಲಿ ಹರಡಿ, ಸುತ್ತಮುತ್ತಲಿನ ಜನರ ಆರೋಗ್ಯದ ಮೇಲೆ ಬಹಳಷ್ಟು ಕೆಟ್ಟ ಪರಿಣಾಮ ಬೀರುತ್ತಿದೆ. ಸದರಿ ಚಿತಾಗಾರದ ಸುತ್ತಲೂ ಅನೇಕ ಶಾಲಾ ಕಾಲೇಜುಗಳು, ದೇವಸ್ಥಾನಗಳು ಚರ್ಚ್ ಮತ್ತು ಮಸೀದಿಗಳಿರುತ್ತವೆ. ಇಲ್ಲಿಗೆ ಬರುವ ಜನರು ಶಾಲಾ ಮಕ್ಕಳು, ಆಸ್ಪತ್ರೆಯಲ್ಲಿನ ರೋಗಿಗಳು ಚಿತಾಗಾರದಿಂದ ಹೊರಸೂಸುವ ವಾಸನೆಯಿಂದಾಗಿ ರೋಸಿ ಹೋಗಿದ್ದಾರೆ. ಈ ಸದರಿ ವಿದ್ಯುತ್ತ ಚಿತಾಗಾರದಿಂದಾಗಿ ಉಂಟಾಗುತ್ತಿರುವ ಸಮಸ್ಯೆಗಳ ಕುರಿತು ಈಗಾಗಲೇ ಬಿ.ಬಿ.ಎಂ.ಪಿ ಹಾಗೂ ಸರ್ಕಾರದ ಗಮನ ಸೆಳೆಯಲಾಗಿತ್ತು. ಆದರೂ ಈ ಸದರಿ ಸಮಸ್ಯೆ ಪರಿಹಾರವಾಗಿಲ್ಲ ಎಂಬ ಬಗ್ಗೆ.

**ಉತ್ತರ:**

ಈ ಮೊದಲು ಹೆಬ್ಬಾಳ ವಿದ್ಯುತ್ ಚಿತಾಗಾರದ ಹೊಗೆ ಹೋಗಲು 100 ಅಡಿ ಎತ್ತರದ ಹೊಗೆ ಕೊಳವೆಯನ್ನು (Chimney) ಅಳವಡಿಸಲಾಗಿತ್ತು. ತದನಂತರ 2022 ರಲ್ಲಿ ಹೊಗೆ ಕೊಳವೆಯು ಮುರಿದಿದ್ದರಿಂದ ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಾನುಸಾರ ಹಾಗೂ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಮೇ 2023 ರಲ್ಲಿ ಹೊಗೆ ಕೊಳವೆಯನ್ನು (Chinmey) 120 ಅಡಿಗೆ ಹೆಚ್ಚಿಸಿ ಅಳವಡಿಸಲಾಗಿರುತ್ತದೆ. ಇದರಿಂದ ಹೊರಸೂಸುವ ಹೊಗೆಯನ್ನು ದೃಶ್ಯ ಗ್ರಹಿಕೆಯಿಂದ ಪರಿಶೀಲಿಸಲಾಗಿ ಹೊಗೆ ಪ್ರಮಾಣವು ಸಾಮಾನ್ಯವಾಗಿರುವುದು ಕಂಡುಬಂದಿರುತ್ತದೆ. ಅಲ್ಲದೇ,

1. ದಹನ ಕ್ರಿಯೆ ನಡೆಸಲು ಅವಶ್ಯವಿರುವ 600 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶಕ್ಕಿಂತ ಹೆಚ್ಚಿನ ಉಷ್ಣಾಂಶದಲ್ಲಿ ಚಿತಾಗಾರದ ಕುಲುಮೆಯಲ್ಲಿ ಶವವನ್ನು ಸಂಸ್ಕಾರ ಮಾಡುವುದರಿಂದ ಕಡಿಮೆ ಪ್ರಮಾಣದಲ್ಲಿ ಹೊಗೆ ಉತ್ಪತ್ತಿಯಾಗುತ್ತದೆ.
2. ದಹನ ಕ್ರಿಯೆಯ ಸಮಯದಲ್ಲಿ ಉತ್ಪತ್ತಿಯಾಗುವ ಹೊಗೆ ಮತ್ತು ಬೂದಿಗಳನ್ನು ನೀರು ಚುಮುಕಿಸುವ ಸ್ಕ್ರಬ್ಬರ್ ಮುಖೇನ ಹಾಯಿಸಿ ಚಿಮಣಿ ಮುಖಾಂತರ 120 ಅಡಿ ಎತ್ತರದಲ್ಲಿ ಲಘು ಪರಿಮಾಣದಲ್ಲಿ ಬಿಡಲಾಗುತ್ತದೆ.
3. ಹೆಬ್ಬಾಳ ವಿದ್ಯುತ್ ಚಿತಾಗಾರದ ಮುಂದೆ ರಾಷ್ಟ್ರೀಯ ಹೆದ್ದಾರಿಯಿದ್ದು ಪಕ್ಕದಲ್ಲಿ ಹೆಬ್ಬಾಳ ಕೆರೆಯಿಂದ ಆವೃತವಾಗಿರುತ್ತದೆ. ಸದರಿ ವಿದ್ಯುತ್ ಚಿತಾಗಾರದ ಪರಿಶೀಲನೆಯನ್ನು ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಹ ಕೈಗೊಳ್ಳಲಾಗಿರುತ್ತದೆ.

**ನಅಇ 73 ಬಿಬಿಎಲ್ 2026**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ